## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ ನಂಃ 32/2020

ಸಿಡಬ್ಲ್ಯೂಃ 17 ಪಿಡಬ್ಲ್ಯೂಃ 9

ಹೆಸರುಃ : ನಿತ್ಯಾನಂದ ಪಂಡಿತ
ತಂದೆ/ಗಂಡನ ಹೆಸರುಃ : ಗೋಪಾಲ ಪಂಡಿತ
ವಯಸ್ಸುಃ : 58 ವರ್ಷ
ಉದ್ಯೋಗಃ : ಪೋಲೀಸ ಇನ್ಸಪೆಕ್ಟರ , ವಿಶೇಷ ಘಟಕ , ಕಾರವಾರ
ವಾಸಃ : ಕಾರವಾರ

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 04-07-2025 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ನಾನು ದಿನಾಂಕಃ 22.06.2018 ರಿಂದ 27.02.2019 ರ ವರೆಗೆ ಸಿಪಿಐ ಕದ್ರಾ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 03.02.2019 ರಂದು ನಾನು ಈ ಪ್ರಕರಣದ ಕಡತವನ್ನು ಚಾಸಾ.16 ರವರಿಂದ ಪಡೆದುಕೊಂಡು ಪರಿಶೀಲಿಸಿ, ದಿನಾಂಕಃ 04.02.2019 ರಂದು ಘಟನಾ ಸ್ಥಳಕ್ಕೆ ತೆರಳಿ ಚಾಸಾ.2 ಮತ್ತು 3 ಪಂಚರನ್ನು ಘಟನಾ ಸ್ಥಳಕ್ಕೆ ಬರಮಾಡಿಕೊಂಡು ಚಾಸಾ.1 ರವರು ತೋರಿಸಿದಂತೆ ಘಟನಾ ಸ್ಥಳದಲ್ಲಿ ಬೆಳಿಗ್ಗೆ 11 ರಿಂದ 12 ಗಂಟೆಯ ನಡುವಿನ ಅವಧಿಯಲ್ಲಿ ಪಂಚನಾಮೆಯನ್ನು ಮಾಡಿ , ಕಚ್ಚಾ ನಕಾಶೆ ತಯಾರಿಸಿ, ಭಾವಚಿತ್ರಗಳನ್ನು ತೆಗೆದಿರುತ್ತೇನೆ. ಸದರಿ ಪಂಚನಾಮೆ ಅಡಿಯಲ್ಲಿ ಅಪಘಾತಪಡಿಸಿದ ಸ್ಕೂಟರ ಸಂಖ್ಯೆ ಜಿ ಎ 08 ವೈ 1243 ನೇದನ್ನು ತಾಂತ್ರಿಕ ಪರೀಕ್ಷೆಗಾಗಿ ತಾತ್ಕಾಲಿಕವಾಗಿ ಜಪ್ತು ಮಾಡಿರುತ್ತೇನೆ. ಚಾಸಾ.7 , 10 ಮತ್ತು 11 ರವರ ಹೇಳಿಕೆಯನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿಕೊಂಡೆನು. ಚಾಸಾ.12 ರವರಿಗೆ ಎಂ ವಿ ಕಾಯ್ದೆ ಕಲಂ 133 ರ ಅಡಿಯಲ್ಲಿ ನೋಟೀಸ ಜಾರಿ ಮಾಡಿರುತ್ತೇನೆ. ಆರೋಪಿತನು ನನ್ನ ಸಮಕ್ಷಮ ಹಾಜರಾಗಿದ್ದು , ಆತನ ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ದಿನಾಂಕಃ 05.02.2019 ರಂದು ಚಾಸಾ.12 ರವರು ನೋಟಿಸಿಗೆ ಉತ್ತರವನ್ನು ನೀಡಿದ್ದು , ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ವಾಹನದ ಯಾಂತ್ರಿಕ ಪರೀಕ್ಷೆ ಮುಗಿದ ನಂತರ ಸೂಕ್ತ ಇಂಡೆಮ್ನಿಟಿ ಬಾಂಡ ಪಡೆದುಕೊಂಡು ಚಾಸಾ.12 ರವರ ತಾಬಾಕ್ಕೆ ಬಿಟ್ಟುಕೊಟ್ಟಿರುತ್ತೇನೆ.

ದಿನಾಂಕಃ 10.02.2019 ರಂದು ಚಾಸಾ.13 ರವರಿಂದ ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿರುತ್ತೇನೆ.

ದಿನಾಂಕಃ 27.02.2019 ರಂದು ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ.18 ರವರಿಗೆ ತನಿಖೆಯ ಕಡತವನ್ನು ಹಸ್ತಾಂತರಿಸಿರುತ್ತೇನೆ. ಘಟನಾ ಸ್ಥಳದ ಪಂಚನಾಮೆ ಈಗಾಗಲೇ ನಿಪಿ.2 ಎಂದು ಗುರುತಿಸಲ್ಪಟ್ಟಿದ್ದು , ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲ್ಪಟ್ಟಿದ್ದು , ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ.3(ಡಿ) ಎಂದು ಗುರುತಿಸಲಾಯಿಪಿತು. ನಿಪಿ.4 ಮತ್ತು 5 ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಮರಣೋತ್ತರ ಪರೀಕ್ಷಾ ವರದಿಯನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದ್ದು , ಸಾಕ್ಷಿ ಅದನ್ನು ನೋೀಡಿ ಗುರುತಿಸುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಚಾಸಾ.12 ರವರಿಗೆ ನೀಡಿದ ನೋಟೀಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ನೋಟೀಸ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ.16 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.16(ಎ) ಎಂದು ಗುರುತಿಸಲಾಯಿತು. ಚಾಸಾ.12 ರವರು ನೀಡಿದ ಉತ್ತರದ ನೋಟೀಸು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅವುಗಳನ್ನು ಕ್ರಮವಾಗಿ ನಿಪಿ.17 ಮತ್ತು 17(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಇಂಡೆಮ್ನಿಟಿ ಬಾಂಡ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಕ್ರಮವಾಗಿ ನಿಪಿ.18 ಮತ್ತು ನಿಪಿ.18(ಎ) ಎಂದುಗುರುತಿಸಲಾಯಿತು. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತನು ಇಂದುನ್ಯಾಯಾಲಯದಲ್ಲಿ ಗೈರು ಹಾಜರಿದ್ದು , ಅತನ ಗುರುತಿಸುವಿಕೆಗೆ ತಕರಾರು ಇಲ್ಲಾ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಡಿ ಎನ್ ನ್ಯಾಯವಾದಿರವರಿಂದಃ</u>**

ಫೆಬ್ರುವರಿ 2019 ರಲ್ಲಿ ಗೋವಾದಿಂದ ಕಾರವಾರಕ್ಕೆ ಬರುವ ರಸ್ತೆಯಲ್ಲಿ ಮಾವಿನಹೊಳೆ ಬ್ರಿಡ್ಜ ಕೆಲಸ ನಡೆಯುತ್ತಿತ್ತು ಎಂದರೆ ನನಗೆ ನೆನಪಿಲ್ಲಾ. ಆ ಸಮಯದಲ್ಲಿ ಒಂದು ರಸ್ತೆಯು ಬಂದ್ ಇದ್ದುದದರಿಂದ ಇನ್ನೊಂದು ರಸ್ತೆಯಲ್ಲಿ ವಾಹನಗಳನ್ನು ಬಿಡುತ್ತಿದ್ದರು ಎಂದರೆ ನನಗೆ ನೆನಪಿಲ್ಲಾ. ಅಪಘಾತ ಆಯಿತು

ಎಂದು ಆಧರಿಸುವ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಆಗಿರುವುದರಿಂದ ಅಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಪಂಚನಾಮೆ ಮಾಡುವ ಕಾಲಕ್ಕೆ ರಬ್ಬರ ಟೇಪ್ ಮೂಲಕ ಮಾರ್ಕ ಮಾಡಿ ಸ್ಥಳವನ್ನು ಕಾಯ್ದಿರಿಸಲಾಗಿತ್ತು. ಅಪಘಾತವು ಡಾಂಬರು ರಸ್ತೆಯ ಮೇಲೆ ಆಗಿರುತ್ತದೆ ಎಂದರೆ ಸರಿಯಲ್ಲ , ಸಾಕ್ಷಿ ಸ್ವತಃ ರಸ್ತೆಯ ಅಂಚಿನಲ್ಲಿ ಆಗಿತ್ತೆಂದು ಸಾಕ್ಷ್ಯ ನುಡಿಯುತ್ತಾರೆ.

ನಾನು ಈ ಪ್ರಕರಣದಲ್ಲಿ ಪಂಚನಾಮೆ ಮಾಡಿರುವುದಿಲ್ಲಾ , ನಕಾಶೆ ತಯಾರಿಸಿರುವುದಿಲ್ಲಾ , ಭಾವಚಿತ್ರಗಳನ್ನು ತೆಗೆದಿರುವುದಿಲ್ಲಾ , ಚಾಸಾ.12 ರವರಿಗೆ ನೋಟೀಸ ಕೊಟ್ಟಿರುವುದಿಲ್ಲಾ , ಉತ್ತರದ ನೋಟೀಸ ಪಡೆದುಕೊಂಡಿರುವುದಿಲ್ಲಾ , ಎಂದರೆ ಸರಿಯಲ್ಲ. ಅಪಘಾತ ಆಯಿತು ಎನ್ನುವ ಸಮಯದಲ್ಲಿ ಏಕಮುಖ ಸಂಚಾರ ಇದ್ದುದರಿಂದ ಗೋವಾದಿಂದ ಕರ್ನಾಟಕ ಹಾಗೂ ಕರ್ನಾಟಕದಿಂದ ಗೋವಾಕ್ಕೆ ಓಡಾಡುವ ವಾಹನಗಳನ್ನು ವೇಗವಾಗಿ ಚಲಾಯಿಸಲು ಆಗುತ್ತಿರಲಿಲ್ಲಾ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಪ್ರ.ದ.ನ್ಯಾದಂ. ಕಾರವಾರ**